# ಖ್ಯಾತಿ ಮತ್ತು ಹಣ

ಇಡೀ ಜಗತ್ತಿಗೇ ಸಂಗೀತದ ಹುಚ್ಚು ಹಿಡಿದಂತಿದೆ. ಜಗತ್ತಿನ ಯಾವ ದೇಶಗಳ ಸೆಲೆಬ್ರಿಟಿಗಳ ಪಟ್ಟಿಯನ್ನೇ ನೋಡಿ– ಅಲ್ಲಿ ಗಾಯಕ–ಗಾಯಕಿಯರೇ ಮುಂದೆ! ಜನಪ್ರಿಯತೆ ಮತ್ತು ಸಂಪತ್ತಿನ ಗಳಿಕೆ ಎರಡರಲ್ಲೂ ಸಂಗೀತಗಾರರು ಬೇರೆಲ್ಲ ವೃತ್ತಿಗಳವರಿಗಿಂತ ಮೈಲಿಗಟ್ಟಲೆ ಮುಂದಿದ್ದಾರೆ. ರಾಜಕಾರಣಿಗಳು ತಮ್ಮ ಬಗ್ಗೆ ಎಷ್ಟೇ ಪ್ರಚಾರ ಮಾಡಿಕೊಂಡರೂ, ಅಂತಿಮವಾಗಿ ಸಂಗೀತಗಾರರ ಜನಪ್ರಿಯತೆಯ ಮುಂದೆ ಅವರೂ ಮಂಕೇ. ಅದರಲ್ಲೂ ಇನ್ನೂ 20–30ರ ಹರೆಯ ತಲುಪುವುದರೊಳಗೇ ಜಗತ್ತಿನಾದ್ಯಂತ ಕೋಟಿಗಟ್ಟಲೆ ಅಭಿಮಾನಿಗಳನ್ನು ಗಳಿಸಿಕೊಳ್ಳುವುದು ಸಂಗೀತಗಾರರ ಹೆಗ್ಗಳಿಕೆಯೇ.

30ರ ಹರೆಯದೊಳಗೆ ಅತ್ಯಧಿಕ ದುಡ್ಡು ಸಂಪಾದಿಸಿದ ಸೆಲೆಬ್ರಿಟಿಗಳ ಪಟ್ಟಿಯೊಂದನ್ನು 'ಫೋರ್ಬ್ಸ್' ಇತ್ತೀಚೆಗೆ ಪ್ರಕಟಿಸಿದೆ. ಅದರಲ್ಲಿ ಮೊದಲ ಸ್ಥಾನದಲ್ಲಿರುವಾತ ಈ ಜಸ್ಟಿನ್ ಬೀಬರ್. ಕೆನಡಾದಲ್ಲಿ ಹುಟ್ಟಿ ಈಗ ಜಗತ್ತಿನಾದ್ಯಂತ ಅಭಿಮಾನಿಗಳನ್ನು ಹೊಂದಿರುವ, ಇನ್ನೂ 20ರ ಹರೆಯದ ಈ ಹುಡುಗ (ಬರ್ತ್‌ಡೇ 1/3/1994) ಈ ವರ್ಷದ ಜೂನ್‌ಗೆ ಅಂತ್ಯಗೊಂಡ ಒಂದೇ ವರ್ಷದಲ್ಲಿ 800 ಲಕ್ಷ ಡಾಲರ್ ಹಣ ಗಳಿಸಿದ್ದಾನೆ! ಟ್ವಿಟ್ಟರ್‌ನಲ್ಲಿ ಈತನ ಅಭಿಮಾನಿಗಳ ಸಂಖ್ಯೆ 5.66 ಕೋಟಿ ದಾಟಿದೆ. ಈತನದೊಂದು ಮ್ಯೂಸಿಕ್ ಆಲ್ಬಂ ಬಿಡುಗಡೆಯಾದರೆ ಒಂದೇ ದಿನದಲ್ಲಿ ಕೋಟಿಗಟ್ಟಲೆ ಸಿ.ಡಿ ಗಳು ಮಾರಾಟವಾಗುತ್ತವೆ ಅಥವಾ ಇಂಟರ್‌ನೆಟ್‌ನಲ್ಲಿ ಡೌನ್‌ಲೋಡ್ ಆಗುತ್ತವೆ. ಈತನ ಲೈವ್‌ಷೋ ಟಿಕೆಟ್‌ಗಳಂತೂ ಹತ್ತು ನಿಮಿಷಗಳಲ್ಲೇ ಪೂರ್ತಿ ಬಿಕರಿಯಾಗುತ್ತವೆ. ತನ್ನ ಹೊಸ ಆಲ್ಬಂನ ತಲಾ 15 ಸೆಕೆಂಡ್‌ಗಳ 11 ಹಾಡುಗಳನ್ನು ಈತ ಇತ್ತೀಚೆಗೆ ಇನ್‌ಸ್ಟಾಗ್ರಾಮ್‌ನಲ್ಲಿ ಹರಿಯಬಿಟ್ಟಿದ್ದಾನೆ. ಆದರೆ ಹೊಸ ಆಲ್ಬಂ ಎಂದು ಬಿಡುಗಡೆಯಾಗುತ್ತದೆ ಎನ್ನುವುದನ್ನು ಪ್ರಕಟಿಸಿಲ್ಲ.

ಇನ್ನೂ ಸರಿಯಾಗಿ ಮೀಸೆ ಮೊಳೆಯುವುದಕ್ಕೆ ಮುನ್ನವೇ ವಿಶ್ವಖ್ಯಾತಿ ಹೊಂದಿರುವ ಈತ ಈ ವರ್ಷ ಮಾತ್ರ ಸಂಗೀತಕ್ಕಿಂತ ಹೆಚ್ಚು ತಲೆಹರಟೆಯ ಮೂಲಕವೇ ಸುದ್ದಿ ಮಾಡಿದ್ದಾನೆ. ಸಿಟ್ಟಿಗೆದ್ದು ಪಕ್ಕದ ಮನೆಯವನ ಮೇಲೆ ಕೋಳಿಮೊಟ್ಟೆ ಎಸೆದ ಈತ ಅದಕ್ಕಾಗಿ 80,000 ಡಾಲರ್ ದಂಡ ನೀಡಲು ಒಪ್ಪಿರುವುದು ಇತ್ತೀಚಿನ ಸುದ್ದಿ. ಪ್ಯಾರಿಸ್‌ನಲ್ಲಿ ಛಾಯಾಗ್ರಾಹಕನೊಬ್ಬನಿಗೆ ಥಳಿಸಿ, ಬಳಿಕ ದಂಡ ತೆತ್ತದ್ದು ಇನ್ನೊಂದು ಸುದ್ದಿ. ಹೀಗಾಗಿಯೇ ಇರಬೇಕು– 2011ರಲ್ಲಿ ವಿಶ್ವದಲ್ಲೇ ಜನಪ್ರಿಯತೆಯಲ್ಲಿ 3ನೇ ಸ್ಥಾನದಲ್ಲಿದ್ದ ಗಾಯಕ ಬೀಬರ್, ಈ ವರ್ಷ 33ನೇ ಸ್ಥಾನಕ್ಕೆ ಕುಸಿದಿದ್ದಾನೆ. ಈತ ಇತ್ತೀಚೆಗೆ ಬೆವೆರ್ಲೀ ಹಿಲ್ಸ್ ಬಳಿ ದೊಡ್ಡ ಗ್ಲಾಸ್‌ಹೌಸ್ ಒಂದನ್ನು ಬಾಡಿಗೆಗೆ ಹಿಡಿದಿದ್ದಾನೆ. 7 ಕಾರ್ ಗ್ಯಾರೇಜ್, 6 ಬೆಡ್‌ರೂಮ್ ಮತ್ತು 7 ಬಾತ್‌ರೂಮ್‌ಗಳಿರುವ ಈ ಭಾರೀ ಬಂಗಲೆಗೆ ತಿಂಗಳಿಗೆ 60,000 ಡಾಲರ್ ಬಾಡಿಗೆ ಫಿಕ್ಸ್ ಆಗಿದೆ! ಪಕ್ಕದ ಮನೆಯವರ ಜತೆ ಜಗಳವಾಡುವ ಪ್ರಶ್ನೆಯೇ ಇಲ್ಲ; ಯಾಕೆಂದರೆ ಈ ಬೃಹತ್ ಬಂಗಲೆಯ ಸುತ್ತ ಮನೆಗಳು ಕಲ್ಲೆಸೆದರೂ ತಾಗದಷ್ಟು ದೂರದಲ್ಲಿವೆ!

ಜಸ್ಟಿನ್ ಬೀಬರ್ ಎಂಬ ಪ್ರತಿಭೆ ಬೆಳಕಿಗೆ ಬಂದದ್ದೂ ಆಕಸ್ಮಿಕವೇ. 2007ರಲ್ಲಿ ಸಂಗೀತ ಆಯೋಜಕ ಸ್ಕೂಟರ್ ಬ್ರೌನ್ ಈತನ ವೀಡಿಯೊ ಒಂದನ್ನು ಯುಟ್ಯೂಬ್‌ನಲ್ಲಿ ನೋಡಿ ಕುತೂಹಲ ತಳೆದಿದ್ದಾನೆ. ಆಗಿನ್ನೂ ಹುಡುಗನಿಗೆ 13 ವರ್ಷ. ಈತನ ಅಮ್ಮನಿಗೆ ಕರೆ ಮಾಡಿ ಹುಡುಗನ ಕಂಠಸಿರಿಯನ್ನು ಪರಿಶೀಲಿಸಿದ ಬ್ರೌನ್, ಹೊಸ ಆಲ್ಬಂ ಒಂದನ್ನು ರೂಪಿಸಲು ನಿರ್ಧರಿಸಿದ್ದಾನೆ. ಹಾಗೆ 2009ರಲ್ಲಿ ಬಂದ ಜಸ್ಟಿನ್ ಬೀಬರ್‌ನ ಮೊದಲ ಆಲ್ಬಂನ ಏಳೂ ಹಾಡುಗಳು 'ಹಿಟ್' ಆಗಿ ಬಿಲ್‌ಬೋರ್ಡ್‌ನ ಟಾಪ್ 100 ಹಾಡುಗಳ ಪಟ್ಟಿಯನ್ನೂ ಸೇರಿ ದಾಖಲೆ ನಿರ್ಮಿಸಿತು. ಅಲ್ಲಿಂದ ಶುರುವಾದ ಜಸ್ಟಿನ್ ಬೀಬರ್‌ನ ಜನಪ್ರಿಯತೆಯ ಪಯಣ 2011ರವರೆಗೂ ಮುಂದುವರಿಯಿತು. ಎಲ್ಲಿಯವರೆಗೆ ಎಂದರೆ ಈಗ ಅತ್ಯಧಿಕ ಗಳಿಕೆಯ ಗಾಯಕರ ಪಟ್ಟಿಯಲ್ಲಿ ಟೇಲರ್ ಸ್ವಿಫ್ಟ್, ಬ್ರೂನೋ ಮಾರ್ಸ್, ರಿಹಾನ್ನಾ, ಜೆನಿಫರ್ ಲಾರೆನ್ಸ್ ಮುಂತಾದ ಖ್ಯಾತನಾಮರನ್ನೂ ಈತ ಹಿಂದಿಕ್ಕಿದ್ದಾನೆ. ಆದರೆ ವೈಯಕ್ತಿಕ ನಡವಳಿಕೆಯನ್ನು ಸರಿ ಮಾಡಿಕೊಳ್ಳದಿದ್ದರೆ ಏರಿದ ಏಣಿಯಿಂದ ಪ್ರಪಾತಕ್ಕೆ ಜಾರುವುದಕ್ಕೆ ಹೆಚ್ಚು ಹೊತ್ತೇನೂ ಹಿಡಿಯುವುದಿಲ್ಲ ಎನ್ನುವುದು ಈತನಿಗೆ ಸದ್ಯಕ್ಕೆ ಅರಿವಾದಂತಿಲ್ಲ.

Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65